# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 368
ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಸಚಿವರು
ಉತ್ತರಿಸುವ ದಿನಾಂಕ : 12.12.2018.

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th><th>Answer</th></tr>
<tr>
<td>ಅ)</td>
<td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ದಾಲ್ ಮಿಲ್‌ಗಳ ಸಂಖ್ಯೆ ಎಷ್ಟು (ತಾಲೂಕಾವಾರು ಮಾಹಿತಿ ನೀಡುವುದು)</td>
<td>ಕಲಬುರುಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ದಾಲ್ ಮಿಲ್‌ಗಳ ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿದೆ.
<table>
<tr><th>ಜಿಲ್ಲೆ</th><th>ತಾಲ್ಲೂಕು</th><th>ಘಟಕಗಳ ಸಂಖ್ಯೆ</th></tr>
<tr><td>ಕಲಬುರುಗಿ</td><td>ಕಲಬುರುಗಿ</td><td>186</td></tr>
<tr><td>ಕಲಬುರುಗಿ</td><td>ಚಿತ್ತಾಪುರ</td><td>7</td></tr>
<tr><td>ಕಲಬುರುಗಿ</td><td>ಜೇವರ್ಗಿ</td><td>1</td></tr>
<tr><td>ಯಾದಗಿರಿ</td><td>ಯಾದಗಿರಿ</td><td>6</td></tr>
<tr><td>ಒಟ್ಟು</td><td></td><td>200</td></tr>
</table>
</td>
<td>The taluk wise figures of Dal Mills present in Kalaburgi and Yadgir district are as shown below:
<table>
<tr><th>District</th><th>Taluk</th><th>No. of units</th></tr>
<tr><td>Kalaburgi</td><td>Kalaburgi</td><td>186</td></tr>
<tr><td>Kalaburgi</td><td>Chittapura</td><td>7</td></tr>
<tr><td>Kalaburgi</td><td>Jevargi</td><td>1</td></tr>
<tr><td>Yadagiri</td><td>Yadagiri</td><td>6</td></tr>
<tr><td>Total</td><td></td><td>200</td></tr>
</table>
</td>
</tr>
<tr>
<td>ಆ)</td>
<td>ದಾಲ್‌ಮಿಲ್‌ಗಳು ಕೆಲವು ಸಮಸ್ಯೆಗಳಿಂದ ಮುಚ್ಚುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದಕ್ಕೆ ಕಾರಣವೇನು (ವಿವರ ನೀಡುವುದು)</td>
<td>ದಾಲ್‌ಮಿಲ್‌ಗಳು ಕೆಲವು ಸಮಸ್ಯೆಗಳಿಂದ ಮುಚ್ಚುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ದಾಲ್ ಮಿಲ್ ಸಂಘವು ಈ ಕೆಳಗಿನ ಕಾರಣಗಳನ್ನು ವಿವರಿಸಿರುತ್ತದೆ.</td>
<td>The issue of Dal Mills getting closed due to certain problems has come to the notice of the Government. The Kalaburgi Dall Millers Association has given the following reasons for the sickness of these Dal Mills.</td>
</tr>
</table>

| | | | |
|---|---|---|---|
| | | **1. ರಾಜ್ಯ ಸರ್ಕಾರದ ಬೆಲೆ ನಿಯಂತ್ರಣ ಕ್ರಮ:**<br><br>ಕಳೆದ 2 ವರ್ಷಗಳ ಹಿಂದೆ ತೊಗರಿ ಬೇಳೆ ಬೆಲೆಯು ಪ್ರತಿ ಕೆ.ಜಿ.ಗೆ ರೂ.180/- ರಿಂದ 200/-ರವರೆಗೆ ಹೆಚ್ಚಾದಾಗ ಸರ್ಕಾರವು ಬೆಲೆ ನಿಯಂತ್ರಣ ಮಾಡಲು ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಆಹಾರ ಇಲಾಖೆಯ ಮೂಲಕ ಎಲ್ಲಾ ದಾಲ್ ಮಿಲ್‌ಗಳ ಗೋದಾಮುಗಳ ಮೇಲೆ ದಾಳಿ ಮಾಡಿ ಬೇಳೆ ಕಾಳುಗಳು ಮತ್ತು ತೊಗರಿ ಬೇಳೆಗಳ ಸಂಗ್ರಹಣೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ನಂತರ ಒಂದು ತಿಂಗಳ ಅವಧಿಯಲ್ಲಿ ಸೀಜ್ ಮಾಡಿದ ಬೇಳೆ ಕಾಳುಗಳನ್ನು ಮಾರಾಟ ಮಾಡಲು ಷರತ್ತು ವಿಧಿಸಲಾಯಿತು. ಇದರಿಂದಾಗಿ ಬೆಲೆಯಲ್ಲಿ ಸಾಕಷ್ಟು ಇಳಿಕೆ ಕಂಡು ಬಂದಿತು ಮತ್ತು ಸರ್ಕಾರವು ಕಡಿಮೆ ಬೆಲೆಯಲ್ಲಿ ಬೇಳೆ ಖರೀದಿಸಿ ವಿಳಂಬವಾಗಿ ಹಣ ಪಾವತಿ ಮಾಡಿತು. ಇದರಿಂದಾಗಿ ಬಹಳಷ್ಟು ದಾಲ್ ಮಿಲ್‌ಗಳು ಬ್ಯಾಂಕಿಗೆ ಹಣವನ್ನು ಸರಿಯಾದ ಸಮಯಕ್ಕೆ ಹಣ ಪಾವತಿ ಮಾಡಲಾಗದೇ ಸುಸ್ತಿದಾರರಾಗಿರುತ್ತಾರೆ. ಇದರಿಂದಾಗಿ ಸುಮಾರು ಘಟಕಗಳು ಉತ್ಪಾದನೆಯನ್ನು ಸ್ಥಗಿತಗೊಳಿಸಿರುತ್ತವೆ.<br><br>**2. ಕೇಂದ್ರ ಸರ್ಕಾರದ ಆಮದು ನೀತಿ:**<br><br>ಕೇಂದ್ರ ಸರ್ಕಾರವು ಬೆಲೆ ನಿಯಂತ್ರಣ ಮಾಡುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಬೇಡಿಕೆ ಪೂರೈಸಲು ಹೊರದೇಶದಿಂದ ಬೇಳೆ ಕಾಳುಗಳ ಆಮದು ಮಾಡಿಕೊಂಡಿದ್ದರಿಂದ ತೊಗರಿ ಬೇಳೆ ಕಾಳುಗಳ ಬೆಲೆಯಲ್ಲಿ ಸಾಕಷ್ಟು ಕುಸಿತ ಕಂಡು ಬಂದಿದೆ. ಕಳೆದ 2 ವರ್ಷಗಳಿಂದ ಪ್ರತಿ | **1. Price regulation by State Government:**<br><br>Two years back when the dal price had increased from Rs.180 to Rs.200 per kg, the State Government to control the price, had seized the stock of dal raw material and dal from all dal mills through Food and Civil Supplies Department and Deputy Commissioner. Later, after one month, Government imposed certain conditions for selling the seized dal. Because of this, the price of dal came down and the Government purchased the goods and delayed the payment. Due to this, Dal Mills have become defaulters as they were unable to repay the loan installments and interest in scheduled time. Because of this many units have stopped production.<br><br>**2. Import policy of Central Government:**<br><br>The Central Government, in order to control the price and supply the demand started importing dal from other countries which resulted in the price drop. During the last two years |

| | | | |
|---|---|---|---|
| | | ಕ್ವಿಂಟಾಲ್‌ಗೆ ರೂ.12,000/- ರಿಂದ ರೂ.15,000/- ವರೆಗೆ ಇದ್ದ ಬೇಳೆ ಕಾಳುಗಳ ಬೆಲೆಯು ಆಮದು ನೀತಿಯಿಂದಾಗಿ ರೂ.4,750/- ರಿಂದ ರೂ.5,000/- ವರೆಗೆ ಇಳಿಕೆಯಾಗಿರುತ್ತದೆ. ಈ ಬೆಲೆ ಇಳಿಕೆ ಕ್ರಮವು ಸತತವಾಗಿ ಕಳೆದ 2 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದ್ದುದರಿಂದ ತೊಗರಿ ಬೇಳೆ ಕಾಳುಗಳನ್ನು ಖರೀದಿಸಿ ಸಂಸ್ಕರಿಸಿ ಮಾರಾಟ ಮಾಡುವ ಹೊತ್ತಿಗೆ ಬೆಲೆ ಇಳಿಕೆಯಿಂದ ಹಾನಿ ಅನುಭವಿಸಿರುತ್ತಾರೆ. ಇದು ಎಲ್ಲಾ ಘಟಕಗಳಲ್ಲಿಯೂ ಕಂಡು ಬಂದ ಸಾಮಾನ್ಯ ತೊಂದರೆಯಾಗಿರುತ್ತದೆ. ಇದರಿಂದಾಗಿಯೂ ಸಾಕಷ್ಟು ಘಟಕಗಳು ನಷ್ಟ ಅನುಭವಿಸಿರುತ್ತವೆ. | the dal rate, which was Rs.12,000 to Rs.15,000 per quintal has dropped down to Rs.4,750 to Rs.5000 per quintal after import policy. Since the price drop is continuous during these two years loss has occurred and the units have become sick. |
| | | **3. ನೆಫೆಡ್ ಮೂಲಕ ಬೇಳೆ ಕಾಳುಗಳ ಖರೀದಿ:**<br><br>ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಮಹಾ ಮಂಡಳಿ (ನೆಫೆಡ್) / ಭಾರತೀಯ ಆಹಾರ ನಿಗಮ (ಎಫ್.ಸಿ.ಐ) ಮೂಲಕ ರೈತರಿಂದ ನೇರವಾಗಿ ತೊಗರಿ ಬೇಳೆ ಕಾಳುಗಳನ್ನು ಖರೀದಿಸಿದ್ದರಿಂದ ದಾಲ್ ಮಿಲ್‌ಗಳಿಗೆ ರೈತರಿಂದ ತೊಗರಿ ಬೇಳೆ ಕಾಳುಗಳ ಖರೀದಿಗೆ ಅವಕಾಶ ಸಿಗಲಿಲ್ಲ. ಈಗಲೂ ಸಹ ಮಾರುಕಟ್ಟೆಯಲ್ಲಿ ತೊಗರಿ ಬೇಳೆ ಕಾಳುಗಳ ಖರೀದಿಗೆ ಅವಕಾಶ ಕಡಿಮೆಯಾಗಿರುತ್ತದೆ. ಪ್ರತಿ ದಿನ ತೊಗರಿ ಬೇಳೆ ಕಾಳುಗಳ ಬೆಲೆಯಲ್ಲಿ ಕುಸಿತ ಕಂಡುಬಂದಿರುವುದರಿಂದ ಸರ್ಕಾರವು ತೊಗರಿ ಬೇಳೆ ಸಂಸ್ಕರಣೆ ಮಾಡಲು ದಾಲ್ ಮಿಲ್‌ಗಳಿಗೆ ನೀಡಲು ತಯಾರಿದ್ದರೂ ಸಹ ಇದರಿಂದಾಗಿ ದಾಲ್ ಮಿಲ್‌ಗಳು ಯಾವುದೇ ಲಾಭ ಪಡೆಯುವ ಅವಕಾಶವಿಲ್ಲ. ಮಾರುಕಟ್ಟೆಯಲ್ಲಿ ತೊಗರಿ ಲಭ್ಯವಿಲ್ಲದಿರುವುದರಂದ ಘಟಕಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ. | **3. Procurement of dall raw material through NAFED:**<br><br>The dall mills didn't get opportunity to procure raw material directly from farmers as the Central Government purchased raw material from farmers through National Agriculture Co-operative Marketing Federation of India (NAFED) / Food Corporation of India. As there was price drop in raw material every day, there was no opportunity to the dal mills to gain profit though the Government was ready to supply raw materials to them. Many dal Mills have closed down due to non-availability of raw material in the market. |

| | | | |
|---|---|---|---|
| | | ಸಭೆಯು ಎಸ್.ಎಲ್.ಬಿ.ಸಿ ಸಂಚಾಲಕರು ಇವರಿಗೆ ಬ್ಯಾಂಕ್‌ಗಳಿಗೆ ಸಂಬಂಧಿಸಿದ 4 ರಿಯಾಯಿತಿಗಳನ್ನು SLBC ಸಭೆಯಲ್ಲಿ ಮಂಡಿಸಲು ತಿಳಿಸಲಾಗಿರುತ್ತದೆ. ದಿನಾಂಕ 7/12/2018 ರಂದು ಜರುಗಿದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯಲ್ಲಿ ವಿಷಯವನ್ನು ಮಂಡಿಸಲಾಗಿರುತ್ತದೆ. ಸದರಿ SLBC ಸಭೆಯಲ್ಲಿ ಈ ಕುರಿತು ಚರ್ಚಿಸಿದ್ದು, ಬೇಳೆ ಸಂಸ್ಕರಣ ಘಟಕಗಳ ಸಮಸ್ಯೆ ಕುರಿತು ಪ್ರತ್ಯೇಕ ಸಭೆ ನಡೆಸುವುದಾಗಿ ತಿಳಿಸಿರುತ್ತಾರೆ. ಉಳಿದ 6 ರಿಯಾಯಿತಿಗಳ ಕುರಿತು ಕ್ರಮವಹಿಸುವಂತೆ ಸಂಬಂಧಿಸಿದ ಇಲಾಖೆಗಳಿಗೆ ತಿಳಿಸಲಾಗಿದೆ. | The meeting has recommended and requested to Convener, SLBC to place the 4 subjects in the SLBC. In the SLBC Meeting held on 7/12/2018 it was discussed and decided to hold a separate meeting for the same.<br><br>The meeting has recommended other concessions to the concerned departments to take action. |

**ಸಿಐ 102 ಸಪ್ರಕೈ 2018**

(ಎಸ್. ಆರ್. ಶ್ರೀನಿವಾಸ್(ವಾಸು))
ಸಣ್ಣ ಕೈಗಾರಿಕೆ ಸಚಿವರು